**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 260/2013** **CW-1** **PW-1**

**ಸಾಕ್ಷಿಯನ್ನು ದಿಃ 26.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಮೋಹನ್ ಕುಮಾರ್ |
| ತಂದೆಯ ಹೆಸರುಃ | ಜೆ ಬಿ ನಿಂಗಪ್ಪ |
| ವಯಸ್ಸುಃ | 71 ವರ್ಷ |
| ವೃತ್ತಿಃ | ವ್ಯವಸಾಯ |
| ವಾಸ ಸ್ಥಳಃ | ಜನಿವಾರ ಗ್ರಾಮ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-2 ರಿಂದ ಚಾಸಾ-4 ಮತ್ತು 6 ರವರ ಪರಿಚಯವಿದೆ. ಚಾಸಾ-5 ರವರು ಈಗ್ಗೆ 2 ವರ್ಷದ ಹಿಂದೆ ಮೃತಪಟ್ಟಿರುತ್ತಾರೆ. ಆರೋಪಿತರ ಪರಿಚಯವಿದೆ.

ದಿಃ 06.11.2012 ರಂದು ಬೆಳಗ್ಗೆ 9.00 ಗಂಟೆ ಸಮಯದಲ್ಲಿ ನಾನು ತೋಟದಿಂದ ಮನೆಗೆ ಬಂದಾಗ ನನ್ನ 10 ತಿಂಗಳ ಮೊಮ್ಮಗು ಹಾಗೂ ಪಕ್ಕದ ಮನೆಯ ಸುಮಾರು 6-7 ವರ್ಷದ ಹುಡುಗ ಇಬ್ಬರು ಆಟವಾಡುತ್ತಿದ್ದಾಗ ಅವರು ಆಡುತ್ತಿದ್ದ ಬಾಲು ಆರೋಪಿತರ ಮನೆಯ ಮೇಲೆ ಹೋಗಿರುತ್ತದೆ. ಬಾಲನ್ನು ತೆಗೆದುಕೊಂಡು ಬರಲು ಮಗುವನ್ನು ಕಳುಹಿಸಿ ನಾನು ಅವರ ಬಾಗಿಲ ಮುಂದೆ ನಿಂತಿದ್ದೆ ಆಗ 1ನೇ ಅರೋಪಿ ಮಗುವನ್ನು ಒಳಗೆ ಬರಬೇಡ ಎಂದು ತಡೆದು ಸುಮ್ಮನೆ ನಿಂತಿದ್ದ ನನ್ನನ್ನು ಅವಾಚ್ಯ ಶಬ್ದಗಳಿಂದ ಬೈದು ದೊಣ್ಣೆಯಿಂದ ನನ್ನ ಎಡಭುಜಕ್ಕೆ ಹೊಡೆದಿರುತ್ತಾರೆ. ನಂತರ 2ನೇ ಅರೋಪಿ ಮಚ್ಚನ್ನು ಹಿಡಿದುಕೊಂಡು ಬಂದಿದ್ದು 1ನೇ ಅರೋಪಿ ಮಚ್ಚನ್ನು ಕಿತ್ತುಕೊಂಡು ನನ್ನ ಎಡತಲೆಗೆ ಹೊಡೆದಿರುತ್ತಾರೆ. 4ನೇ ಅರೋಪಿ ದೊಣ್ಣೆಯಿಂದ ನನ್ನ ಎಡಭುಜಕ್ಕೆ ಹಾಗೂ ಬೆನ್ನಿಗೆ ಹೊಡೆದಿರುತ್ತಾರೆ. 2ನೇ ಆರೋಪಿ ಕಾಲಿನಿಂದ ನನ್ನ ಮೈಮೇಲ ಹೊಡೆದಿರುತ್ತಾರೆ. 3ನೇ ಆರೋಪಿ ಕೈಯಿಂದ ನನ್ನ ಮರ್ಮಾಂಗಕ್ಕೆ ಹೊಡೆದಿರುತ್ತಾರೆ. 4 ಆರೋಪಿಗಳು ನನ್ನನ್ನು ಸುತ್ತುವರಿದು ಹೊಡೆದಿರುತ್ತಾರೆ. ಆಗ ಚಾಸಾ-2 ಮತ್ತು 3 ರವರ ಬಂದು ಜಗಳ ಬಿಡಿಸಿರುತ್ತಾರೆ. ನಂತರ ಎಲ್ಲಾ

ಆರೋಪಿತರು ನನಗೆ ಕೊಲೆ ಬೆದರಿಕೆ ಹಾಕಿರುತ್ತಾರೆ. ನಂತರ ಚಾಸಾ-4 ರವರು ನನ್ನನ್ನು ಚನ್ನರಾಯಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು ಹೆಚ್ಚಿನ ಚಿಕಿತ್ಸೆಗೆ ಹಾಸನದ ಎಸ್ ಎಸ್ ಎಂ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸಂಜೆ 4.00 ರಿಂದ 4.30 ರ ಸಮಯದಲ್ಲಿ ಪೋಲೀಸರು ಆಸ್ಪತ್ರೆಗೆ ಬಂದು ನನ್ನಿಂದ ಹೇಳಿಕೆ ದೂರನ್ನು ಪಡೆದಿರುತ್ತಾರೆ.

ಸಾಕ್ಷಿ ಹೇಳಿಕೆ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ನ್ಯಾಯೂಲಯದಲ್ಲಿರುವ ಎರಡು ದೊಣ್ಣೆ ಹಾಗೂ ಒಂದು ಮಚ್ಚನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು ಮಾ -1 ರಿಂದ 3 ಎಂದು ಗುರುತಿಸಲಾಯಿತು.

ಸಾಕ್ಷಿ ನ್ಯಾಯಾಲಯದಲ್ಲಿ 1, 2 ಮತ್ತು 4 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

(3ನೇ ಆರೋಪಿ ಗೈರು ಹಾಜರಿದ್ದು ಆರೋಪಿ ಪರ ವಕೀಲರು ಆರೋಪಿಯನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ).

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಕೆ ಜೆ ಡಿ ರವರಿಂದ ಃ**

ಆರೋಪಿ ಪರ ವಕೀಲರು ಪಾಟಿ ಸವಾಲಿಗಾಗಿ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

**ಮರು ವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ .)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**